ಸಿ. ಸಿ. ನಂ.- **92/2021**

ಪಿ.ಡಬ್ಲ್ಯೂ.- **1**

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ ದಂ.ಗಳ ನ್ಯಾಯಾಲಯ, ಹೊಸಪೇಟೆ.
ಸಾಕ್ಷಿಯನ್ನು ದಿನಾಂಕ **06-09-2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲು- ಆರೋಪಿತರ ಪರ ವಕೀಲರಾದ ಶ್ರೀ ಜೆ.ವಿ.ಪಿ ರವರಿಂದ-

ಅಬಿದ್ ಹುಸೇನ್ ರವರು ತಯಾರು ಮಾಡಿ ಕೊಟ್ಟ ದೂರನ್ನು ನಾನು ಠಾಣೆಗೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಅವರು ಸಹಿ ಮಾಡಿಕೊಟ್ಟ ದೂರನ್ನು ನಾನು ಠಾಣೆಗೆ ಸಲ್ಲಿಸಿಲ್ಲ ಎಂದರೆ ಸರಿ. ಅಬಿದ್ ಹುಸೇನ್‌ರವರು ದೂರನ್ನು ತಯಾರಿಸಿ ಠಾಣೆಗೆ ಸಲ್ಲಿಸು ಎಂದು ಲಿಖಿತವಾದ ಆದೇಶ ಕೊಟ್ಟಲ್ಲ ಎಂದರೆ ಸಾಕ್ಷಿ ಮೌಖಿಕವಾಗಿ ಆದೇಶ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಅಬಿದ್ ಹುಸೇನ್ ರವರು ಮೌಖಿಕವಾಗಿ ನೀಡಿದ ಆದೇಶದ ಮೇರೆಗೆ ನಾನು ದೂರನ್ನು ಸಲ್ಲಿಸುತ್ತಿದ್ದೇನೆ ಎಂದು ನಿಪಿ 1 ದೂರಿನಲ್ಲಿ ನಮೂದು ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ದೂರು ನೀಡಲು ನನಗೆ ಎ.ಜಿ.ಎಂ ರವರು ಪತ್ರ ಕಳುಹಿಸಿದ್ದರು ಎಂದು ನುಡಿಯುತ್ತಾರೆ. ಸದರಿ ಪತ್ರದಲ್ಲಿ ದೂರನ್ನು ತಯಾರಿಸಿ ಸಲ್ಲಿಸಲು ನನಗೆ ನಿಖರವಾಗಿ ನಿರ್ದೇಶನವನ್ನು ನೀಡಿಲ್ಲ. ಯಾರ ಆದೇಶದ ಮೇಲೆ ನಿಪಿ 1 ದೂರು ಕೊಡುತ್ತಿದ್ದೇನೆ ಎಂದು ಸದರಿ ದೂರಿನಲ್ಲಿ ನಮೂದು ಇಲ್ಲ ಎಂದರೆ ಸರಿ.

ಆರೋಪಿ ನಮ್ಮ ಬ್ಯಾಂಕ್‌ನಲ್ಲಿ Single window Operator ಆಗಿ ಕೆಲಸ ಮಾಡುತ್ತಿದ್ದರು. ಬ್ಯಾಂಕಿನ ವ್ಯವಹಾರಗಳನ್ನು ಸ್ಯಾಕ್ಷನ್ ಮಾಡುವ ಸಂಪೂರ್ಣ ಅಧಿಕಾರ ಆರೋಪಿಗೆ ಇಲ್ಲ ಎಂದರೆ ಸರಿ. ಆರೋಪಿ ಅಧಿಕಾರ ವ್ಯಾಪ್ತಿಗೆ ಮೀರಿದ ಹಣದ ವ್ಯವಹಾರದ ಚೆಕ್ ಅಥವಾ ಇತರೆ ದಾಖಲೆಗಳನ್ನು ಅದರ ಅಪ್ರವಲ್ ಗಾಗಿ ಅವರ ಮೇಲಾಧಿಕಾರಿಗಳಾದ ಲೆಕ್ಕಿಗರಿಗೆ ಅಥವಾ ಶಾಖೆಯ ವ್ಯವಸ್ಥಾಕರಿಗೆ ಸಲ್ಲಿಸುತ್ತಾರೆ. Single window Operator ರವರ ವ್ಯಾಪ್ತಿಗೆ ಬರುವ ಹಣದ ಮೀತಿಯ ಕುರಿತು ನಾನು ಪೊಲೀಸ್‌ರಿಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಆದರೆ ಮೌಖಿಕವಾಗಿ ಹೇಳಿರುತ್ತೇನೆ. ಸಾಕ್ಷಿ ಮುಂದುವರೆದು ನಾನು ದೂರಿನಲ್ಲಿ ಈ ಹಣದ ಮೀತಿಯ ಬಗ್ಗೆ ದೂರಿನಲ್ಲಿ ನಮೂದು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿ ಅಪರಾಧ ಆಗಿದೆ ಎಂದು ಹೇಳಲಾದ ಅವಧಿಯಲ್ಲಿ ಬ್ಯಾಂಕ್ ನಲ್ಲಿ Single window Operator ಆಗಿ ಕೆಲಸ ಮಾಡುತ್ತಿದ್ದರು ಎಂದು ತೋರಿಸಲು ನಾನು ಕಚೇರಿ ಆದೇಶದ ಪತ್ರವನ್ನು ಪೊಲೀಸ್‌ರಿಗೆ ಕೊಟ್ಟಿರುತ್ತೇನೆ. ಘಟನೆ ಆಗಿದೆ ಎಂದು ಹೇಳಲಾದ ದಿನದಿಂದ ಪೂರ್ವದಲ್ಲಿ ಬ್ಯಾಂಕಿನ ಗ್ರಾಹಕರಿಗೆ

ಸಿ. ಸಿ. ನಂ.- **92/2021**

ಪಿ.ಡಬ್ಲ್ಯೂ- **1**

ಎ.ಟಿ.ಎಂ ಕಾರ್ಡ್ ಕೊಟ್ಟಿರುವ ಬಗ್ಗೆ ನನ್ನ ಪ್ರಾಥಮಿಕ ತನಿಖಾ ವರದಿಯಲ್ಲಿ ನಮೂದು ಮಾಡಿರುತ್ತೇನೆ. ನಿಖರವಾದ ದಿನವನ್ನು-ಹೇಳಿ ಆ ದಿನದಂದು ಗ್ರಾಹಕರಿಗೆ ಎ.ಟಿ.ಎಂ ಕಾರ್ಡ್ ಕೊಟ್ಟಿರುತ್ತಾರೆ ಎಂಬ ಬಗ್ಗೆ ಬ್ಯಾಂಕಿನ ಅಧಿಕಾರಿಗಳಿಂದ ಹೇಳಿಕೆಯನ್ನು ಪಡೆದಿಲ್ಲ. ಸಾಕ್ಷಿ ಮುಂದುವರೆದು ಆರೋಪಿ ಒಪ್ಪಿಕೊಂಡಿದ್ದರಿಂದ ಈ ಹೇಳಿಕೆ ಪಡೆದಿಲ್ಲ ಎಂದು ನುಡಿಯುತ್ತಾರೆ.

ಪ್ರಾಥಮಿಕ ತನಿಖೆ ನಡೆಸುವ ಸಮಯದಲ್ಲಿ ನಾನು ಆರೋಪಿಯಿಂದ ಎಷ್ಟು ಸಹಿಗಳನ್ನು ಪಡೆದಿದ್ದಿರಿ ಎಂದರೆ ಸಾಕ್ಷಿ ನಾನು ಸಹಿಗಳನ್ನು ಪಡೆದಿಲ್ಲ ಎಂದು ನುಡಿಯುತ್ತಾರೆ. ಯಾವುದೇ ಹಣವನ್ನು ವಿಥ್ ಡ್ರಾ ಮಾಡುವ ಹಾಗೂ ಠೇವಣಿ ಇಡುವ ಬಗ್ಗೆ ನಿಗವಹಿಸಲು ಸಿಸಿ ಟಿವಿ ಅಳವಡಿಸಲಾಗಿತ್ತೇ ಎಂದರೆ ನನಗೆ ನೆನಪಿಲ್ಲ. ಎ.ಟಿ.ಎಂ ಯಂತ್ರ ಇನ್‌ಸ್ಟಾಲ್ ಮಾಡಿದ ಜಾಗದಲ್ಲಿ ಸಿಸಿ ಟಿವಿ ಕ್ಯಾಮರಾ ಅಳವಡಿಸಲಾಗಿರುತ್ತದೆ ಎಂದರೆ ಸರಿ. ಯಾವ ಗ್ರಾಹಕರು ಯಾವ ಎ.ಟಿ.ಎಂ ಕಾರ್ಡ್ ಉಪಯೋಗಿಸಿ ಹಣವನ್ನು ವಿಥ್ ಡ್ರಾ ಮಾಡಿದ್ದರು ಎಂಬ ಬಗ್ಗೆ ಸಿಸಿಟಿವಿ ಫುಟೇಜ್ ಇದೆಯೇ ಎಂದರೆ ಸಾಕ್ಷಿ ಆರೋಪಿಯೇ ಖುದ್ದಾಗಿ ಗ್ರಾಹಕರ ಎಟಿಎಂ ಕಾರ್ಡ್ ನಿಂದ ಹಣ ವಿಥ್ ಡ್ರಾ ಮಾಡಿರುವುದಾಗಿ ಒಪ್ಪಿರುತ್ತಾರೆ. ಹೀಗೆ ಗ್ರಾಹಕರ ಎ.ಟಿ.ಎಂ ಕಾರ್ಡ್ ಉಪಯೋಗಿಸಿದ ಬಗ್ಗೆ ಅಥವಾ ಹಣವನ್ನು ವಿಥ್ ಡ್ರಾ ಮಾಡಿರುವ ಬಗ್ಗೆ ಆರೋಪಿ ನನಗೆ ಎಂದಿಗೂ ಹೇಳಿಕೆ ಕೊಟ್ಟಿಲ್ಲ ಎಂದರೆ ಸಾಕ್ಷಿ ಅವರು ಸ್ವಇಚ್ಛೆ ಹೇಳಿಕೆಯನ್ನು ದಿಃ 27.11.2015 ಹಾಗೂ ದಿಃ 30.11.2015 ರಂದು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಈ ರೀತಿ ಹಣವನ್ನು ಎ.ಟಿ.ಎಂ ಕಾರ್ಡ್ ಉಪಯೋಗಿಸಿ ಹಣ ವಿಥ್ ಡ್ರಾ ಮಾಡಿರುವ ಬಗ್ಗೆ ಸಿಸಿಟಿವಿ ಫುಟೇಜ್ ನಲ್ಲಿ ಪರಿಶೀಲಿಸಿದ್ದೀರೆ ಎಂದರೆ ಇಲ್ಲ. ಸಾಕ್ಷಿ ಮುಂದುವರೆದು ಆರೋಪಿಯೇ ಒಪ್ಪಿಕೊಂಡಿದ್ದರಿಂದ ಅದರ ಪರಿಶೀಲನೆ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ಆರೋಪಿ ನಾನು ಹೇಳಿದಂತೆ ಎಂದಿಗೂ ಸ್ವಇಚ್ಛೆ ಹೇಳಿಕೆ ಕೊಟ್ಟಿಲ್ಲ ಅದನ್ನು ನಾನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

ಬ್ಯಾಂಕ್‌ನ ಯಾವ ಗ್ರಾಹಕರು ತಮ್ಮ ಎಟಿಎಂ ಕಾರ್ಡ್ ನ್ನು ಯಾರಿಗೆ ಕೊಟ್ಟಿರುತ್ತಾರೆ ಎಂಬ ಬಗ್ಗೆ ನನ್ನ ವರದಿಯಲ್ಲಿ ನಮೂದು ಇಲ್ಲ. ಸಾಕ್ಷಿ ಮುಂದುವರೆದು ಇಬ್ಬರು ಗ್ರಾಹಕರ ಎಟಿಎಂ ಕಾರ್ಡ್ ನ್ನು ಆರೋಪಿ ತೆಗೆದುಕೊಂಡಿರುತ್ತಾರೆ ಎಂದು ಅವರೇ ಹೇಳಿಕೆಯನ್ನು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಗ್ರಾಹಕರು ಯಾವ ಕಾರಣಕ್ಕೆ ತಮ್ಮ ಎಟಿಎಂ ಕಾರ್ಡ್‌ನ್ನು ಆರೋಪಿಗೆ ಕೊಟ್ಟಿದ್ದರು ಎಂಬ ಬಗ್ಗೆ ನನ್ನ ಪ್ರಾಥಮಿಕ ತನಿಖೆಯಲ್ಲಿ ಕಂಡು ಬಂದಿರುವುದಿಲ್ಲ. ಯಾವ ದಿನಾಂಕದಂದು

ಯಾವ ಗ್ರಾಹಕರು ಯಾರಿಗೆ ಯಾವ ಉದ್ದೇಶಕ್ಕಾಗಿ ತಮ್ಮ ಎಟಿಎಂ ಕಾರ್ಡ್‌ನ್ನು ಕೊಟ್ಟಿದ್ದರು ಎಂಬ ಬಗ್ಗೆ ನನ್ನ ಪ್ರಾಥಮಿಕ ತನಿಖೆಯಲ್ಲಿ ಕಂಡು ಬಂದಿಲ್ಲ ಆದರೆ ಆರೋಪಿ ಅದರ ಬಗ್ಗೆ ಸ್ವಇಚ್ಛೆ ಹೇಳಿಕೆ ಕೊಟ್ಟಿರುತ್ತಾರೆ. ಆರೋಪಿ ನನ್ನ ಪ್ರಾಥಮಿಕ ತನಿಖಾವಧಿಯಲ್ಲಿ ನಾನು ಹೇಳಿದಂತೆ ಸ್ವ ಇಚ್ಛೆ ಹೇಳಿಕೆ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ.

ಎಫ್.ಡಿ ಖಾತೆಯ ಮೊತ್ತವನ್ನು ಅವಧಿ ಮುಗಿಯೊಳಗೆ ವಿಥ್ ಡ್ರಾ ಮಾಡಬೇಕಾದರೆ ಗ್ರಾಹಕರು ತಮ್ಮ ಬಾಂಡ್‌ನ್ನು ಯಾರಿಗೆ ಸಲ್ಲಿಸಬೇಕು ಎಂದರೆ ಸಾಕ್ಷಿ ಅವರು ಕೌಂಟರ್ ನಲ್ಲಿ ಸಲ್ಲಿಸಬೇಕು ಎಂದು ನುಡಿಯುತ್ತಾರೆ. ಈ ರೀತಿ ಅವಧಿಗೆ ಮುನ್ನ ಎಫ್.ಡಿ ಖಾತೆಯ ಮೊತ್ತವನ್ನು ವಿಥ್ ಡ್ರಾ ಮಾಡಲು ಸುಮ್ಮತಿಯನ್ನು ಯಾವ ಅಧಿಕಾರಿ ಕೊಡುತ್ತಾರೆ ಎಂದರೆ ಸಾಕ್ಷಿ Single window Operator ರವರ ವ್ಯಾಪ್ತಿಗೆ ಆ ಮೊತ್ತ ಬಂದರೆ ಅವರೆ ಸಮ್ಮತಿ ಕೊಡುತ್ತಾರೆ ಎಂದು ನುಡಿದು ಮುಂದುವರೆದು ಈ ರೀತಿ ಮೊತ್ತವನ್ನು ನೇರವಾಗಿ ಗ್ರಾಹಕರ ಖಾತೆಗೆ ವರ್ಗಾವಣೆ ಮಾಡಲಾಗುತ್ತದೆ ಎಂದು ನುಡಿಯುತ್ತಾರೆ. ಸದರಿ Single window Operator ನ ವ್ಯಾಪ್ತಿಯ ಮೇಲ್ಪಟ್ಟಂತೆ ಮೊತ್ತ ಇದ್ದರೆ ಅವರ ಮೇಲಾಧಿಕಾರಿಗೆ ಸಮ್ಮತಿಗೆಂದು ಅರ್ಜಿ ಸಲ್ಲಿಸಲಾಗುತ್ತದೆ. ಎಫ್.ಡಿ ಬಾಂಡ್ ಯಾವ ಗ್ರಾಹಕರ ಹೆಸರಿನಲ್ಲಿ ಇರುತ್ತದೆಯೋ ಅವರು ಬಾಂಡ್‌ನ ಹಿಂದುಗಡೆ ಅವರ ಹೆಸರು, ಅವರ ತಂದೆಯ ಹೆಸರು ಹಾಗೂ ಇತರೆ ಮಾಹಿತಿಯನ್ನು ದಿನಾಂಕ ಹಾಗೂ ಸಮಯದ ಜೊತೆ ಸಹಿ ಸಹ ಹಾಕಬೇಕು ಎಂದರೆ ಸರಿ. ಗ್ರಾಹಕರ ರೇಫರಲ್ ಸಹಿಯನ್ನು ಬಾಂಡ್ ಹಿಂದೆ ಇರುವ ಸಹಿ ಜೊತೆ ತಾಳೆ ಮಾಡಿದ ನಂತರ ಒಂದಕ್ಕೊಂದು ಹೊಂದಾಣಿಕೆ ಆದರೆ ಆ ಮೊತ್ತವನ್ನು ಗ್ರಾಹಕರಿಗೆ ವರ್ಗಾವಣೆ ಮಾಡಲಾಗುತ್ತದೆ. ಸಾಕ್ಷಿ ಮುಂದುವರೆದು ಈ ಕುರಿತು ಅರ್ಜಿಯನ್ನು ಸಹ ಪಡೆಯುತ್ತೇವೆ ಎಂದು ನುಡಿಯುತ್ತಾರೆ. ನನ್ನ ಪ್ರಾಥಮಿಕ ತನಿಖಾವಧಿಯಲ್ಲಿ ಗ್ರಾಹಕರು ಈ ಮೇಲೆ ಹೇಳಿದ ಎಫ್.ಡಿ ಮೊತ್ತದ ವಿಥ್ ಡ್ರಾ ಗೆ ಅರ್ಜಿ ಸಲ್ಲಿಸಿರುವುದು ಕಂಡು ಬಂದಿಲ್ಲ. ಬ್ಯಾಂಕಿಗೆ ಯಾವ ಅಧಿಕಾರಿ ಯಾವ ದಿನ ಎಷ್ಟು ಗಂಟೆಟೆ ಬಂದು ಹೋಗಿರುತ್ತಾರೆ ಎಂಬ ಬಗ್ಗೆ ಸಿಸಿಟಿವಿ ಕ್ಯಾಮರಾದಲ್ಲಿ ರೆಕಾರ್ಡ್ ಅಗಿರುತ್ತದೆ ಎಂದರೆ ಸಾಕ್ಷಿ ಆಗ ಸಿಸಿಟಿವಿ ಕ್ಯಾಮರಾ ಇದ್ದ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಾನು ತನಿಖಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುವಾಗ ಎಲ್ಲಾ ನಿಟ್ಟಿನಲ್ಲಿ ಯೋಚಿಸಿ ತನಿಖೆ ಮಾಡಬೇಕು ಎಂದರೆ ಸರಿ. ಇಲ್ಲಿಯವರೆಗೂ ಅಂತಿಮ ತನಿಖಾ ವರದಿಯನ್ನು ಈ ಪ್ರಕರಣಕ್ಕೆ

ಸಿ. ಸಿ. ನಂ.- **92/2021**

ಪಿ.ಡಬ್ಲ್ಯೂ.- **1**

ಸಂಬಂಧಿಸಿದಂತೆ ಸಲ್ಲಿಸಿಲ್ಲ ಎಂದರೆ ಸಾಕ್ಷಿ ನಾನು ಪ್ರಾಥಮಿಕ ತನಿಖಾವರದಿಯನ್ನು ಸಲ್ಲಿಸಿದ ತಕ್ಷಣ ನಿವೃತ್ತಿ ಹೊಂದಿದ್ದು ಹೀಗಾಗಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಂತಿಮ ತನಿಖಾವರದಿಯನ್ನು ಮಾನ್ಯ ನ್ಯಾಯಾಲಯದ ಮುಂದೆ ಇಲ್ಲಿಯವರೆಗೆ ಸಲ್ಲಿಸಿಲ್ಲ ಎಂದರೆ ಸಾಕ್ಷಿ ನಾನು ಸಲ್ಲಿಸಿಲ್ಲ ಹೀಗಾಗಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಸ್ವಖುಷೀ ಹೇಳಿಕೆ ಕೊಟ್ಟಿರುತ್ತಾರೆ ಎಂದು ನಾನು ಹೇಳಿರುವುದನ್ನು ಹೊರತುಪಡಿಸಿ ಆರೋಪಿಯ ವಿರುದ್ಧ ಮಾಡಿದ ಆಪಾಧನೆಗಳಿಗೆ ಪೂರಕವಾಗಿ ಆಪಾಧನೆಗಳನ್ನು ಪ್ರಾಥಮಿಕ ತನಿಖಾವರದಿಯಲ್ಲಿ ಸಲ್ಲಿಸಿರುತ್ತೀರೆ ಎಂದರೆ ಸಾಕ್ಷಿ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಪ್ರಾಥಮಿಕ ತನಿಖೆಯ ವರದಿಯಲ್ಲಿ ಆರೋಪಿ ಸ್ವಇಚ್ಚೆ ಹೇಳಿಕೆಯನ್ನು ಕೊಟ್ಟಿರುತ್ತಾರೆ ಎಂಬ ಬಗ್ಗೆ ನಮೂದು ಮಾಡಿರುತ್ತೇನೆ. ಆರೋಪಿ ನೀಡಿರುತ್ತಾರೆ ಎಂದು ಹೇಳಿದ ಸ್ವಖುಷಿ ಹೇಳಿಕೆಗೆ ನಾನು ಮತ್ತು ಎನ್ ಸೋಮನಾಥರವರು ಸಹಿ ಮಾಡಿ ಅದನ್ನು ವರದಿ ಜೊತೆ ಲಗತ್ತಿಸಿರುತ್ತೀರೆ ಎಂದರೆ ಸಾಕ್ಷಿ ಲಗತ್ತಿಸಿರುತ್ತೇವೆ ಎಂದು ನುಡಿಯುತ್ತಾರೆ. ನಾವು ಪಡೆದಿರುತ್ತೇವೆ ಎಂದು ಹೇಳಿದ ಸ್ವಖುಷೀ ಹೇಳಿಕೆಯನ್ನು ದೋಷಾರೋಪಣ ಪತ್ರದ ಜೊತೆ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿಯಿಂದ ಸ್ವಖುಷೀ ಹೇಳಿಕೆಗಳನ್ನು ನಾವು ಪಡೆಯದೆ ಇದ್ದರು, ಮಾನ್ಯ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಸಮಯದ ಆಭಾವ ಇದ್ದರಿಂದ ಮಂಜೂರು ಮಾಡಲಾಯಿತು)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ಹೊಸಪೇಟೆ.